ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 11 /2022-23 ದಿನಾಂಕ: 04.06.2022

## ದಿನಾಂಕ-04.06.2022 ರಂದು ನಡೆದಿರುವ ವಿಜಿನಾಪುರ ವಾರ್ಡ್ ಸಂಖ್ಯೆ-51 ರ ವಾರ್ಡ್ ಸಮಿತಿ ಸಭೆ ನಡುವಳಿಗಳು

| | ಸದಸ್ಯರ ಹೆಸರು ಮತ್ತು ಪದನಾಮ | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀಮತಿ.ತ್ರಿವೇಣಿ (ಅಧ್ಯಕ್ಷರು) | ಹಾಜರು |
| 2 | ಶ್ರೀ.ನಾಗಭೂಷಣ, ಸಹಾಯಕ ಅಭಿಯಂತರರು (ವಾರ್ಡ್ ನಂ.51) (ಕಾರ್ಯದರ್ಶಿ) | ಹಾಜರು |
| 3 | ಶ್ರೀ.ರಾಜಣ್ಣ (ಹಿ.ಆ.ಪ) ವಾರ್ಡ್ ನಂ.51 | ಹಾಜರು |
| 4 | ಶ್ರೀ.ಮಧು (ಕಿ.ಆ.ಪ) ವಾರ್ಡ್ ನಂ.51 | ಹಾಜರು |
| 5 | ಶ್ರೀ.ಮಂಜುನಾಥ ಬಡಿಗೇರ್ (ಕಂದಾಯ ಪರಿವೀಕ್ಷಕರು) | ಹಾಜರು |
| 6 | ಶ್ರೀ.ಸಂಜೀವಯ್ಯ (ಪಿ.ಎಸ್.ಐ, ಟ್ರಾಫಿಕ್) | ಹಾಜರು |
| 7 | ಶ್ರೀ.ಡಿ.ವಿ.ಮೋಹನ್ ಲೈವ್ ಸ್ಟಾಕ್ ಆಫೀಸರ್ | ಹಾಜರು |
| 8 | ಶ್ರೀ.ರಾಮಚಂದ್ರ (ಅಂಬೇಡ್ಕರ್ ನಗರ) | ಹಾಜರು |
| 9 | ಶ್ರೀ.ಗೋಪಾಲ್ ಕೃಷ್ಣ (ಬಿಡಿಎ ಲೇಔಟ್) | ಹಾಜರು |
| 10 | ಶ್ರೀ.ದರ್ಶನ್.ಡಿ.ಎಸ್ (ಮಾರ್ಷಲ್) | ಹಾಜರು |
| 11 | ಶ್ರೀ.ವಿ.ಪ್ರಭಾಕರ್ (ಎಸ್.ಪಿ.ನಾಯ್ಡು ಲೇಔಟ್) | ಹಾಜರು |
| 12 | ಶ್ರೀ.ರಂಗಯ್ಯ (ವಾಟರ್ ಇನ್ಸಪೆಕ್ಟರ್) | ಹಾಜರು |
| 13 | ಶ್ರೀಮತಿ.ಪ್ರಿಯದರ್ಶಿನಿ | ಹಾಜರು |
| 14 | ಶ್ರೀ.ದೇವರಾಜ್ (ಅಂಬೇಡ್ಕರ್ ನಗರ) | ಹಾಜರು |
| 15 | ಶ್ರೀ.ಪುಷ್ಪರಾಜು (ಸದಸ್ಯರು) | ಹಾಜರು |

ದಿನಾಂಕ-04.06.2022 ರಂದು ಪೂರ್ವಾಹ್ನ 11.30 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಶ್ರೀಮತಿ.ತ್ರಿವೇಣಿ ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿ ವೃಂಧದವರಿಗೆಲ್ಲಾ ಸ್ವಾಗತಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ಶ್ರೀ.ರಾಮಚಂದ್ರ (ಅಂಬೇಡ್ಕರ್‌ನಗರ) ರವರು ಮಾತನಾಡಿ ಅಂಬೇಡ್ಕರ್‌ನಗರ 1ನೇ ಅಡ್ಡರಸ್ತೆ (ಮದರಸ) ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ನಿರ್ಮಾಣ ಮಾಡಲು ಕಾಂಕ್ರೀಟ್ ರಸ್ತೆಯನ್ನು ಅಗೆದಿದ್ದು, ಸದರಿ ರಸ್ತೆಯಲ್ಲಿ ಒಳಚರಂಡಿ ನಿರ್ಮಾಣ ಮಾಡದೇ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿದೆ. ಇದರ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಕೋರಿದರು.

**ಕ್ರಮ:-** ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2. ಶ್ರೀ.ವಿ.ಪ್ರಭಾಕರ್ (ಎಸ್.ಪಿ.ನಾಯ್ಡು ಲೇಔಟ್) ರವರು ಮಾತನಾಡುತ್ತಾ, ರಾಮಮೂರ್ತಿನಗರ ಮುಖ್ಯರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಅಡ್ಡರಸ್ತೆಯಿಂದ ಮುಖ್ಯರಸ್ತೆಗೆ ಸಂಚರಿಸಲು ತುಂಬಾ ತೊಂದರೆಯಾಗುತ್ತಿರುತ್ತದೆ. ಸಂಚಾರಿ ಪೋಲೀಸರನ್ನು ನಿಯೋಜಿಸಿ ಇದರ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಕೋರಿದರು. ಹಾಗೂ ಎಸ್.ಪಿ.ನಾಯ್ಡು ಲೇಔಟ್ ಮುಖ್ಯರಸ್ತೆಯ ಚರಂಡಿಯಲ್ಲಿ ಹೂಳು ತುಂಬಿದ್ದು, ನೀರು ಸರಾಗವಾಗಿ ಹರಿಯದೇ ರಸ್ತೆಯಲ್ಲಿ ಹರಿಯುತ್ತಿರುತ್ತದೆ. ಇದರ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಕೋರಿದರು.

ಕ್ರಮ:- ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೋಲೀಸ್ ರವರಿಗೆ ಮತ್ತು ಸಹಾಯಕ ಅಭಿಯಂತರರು ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

3. ಶ್ರೀ.ಸುಲ್ತಾನ್ ಮಿರ್ಜಾ, ವಿಜಿನಾಪುರ ರವರು ಮಾತನಾಡಿ 2ನೇ ಅಡ್ಡರಸ್ತೆ, ಬೃಂದಾವನ್ ಬಡಾವಣೆಯಲ್ಲಿ ಕಾವೇರಿ ನೀರು ಸರಿಯಾದ ಸಮಯಕ್ಕೆ ಬಿಡದೇ ಹಾಗೂ ಕಾವೇರಿ ನೀರಿನ ಸಮಸ್ಯೆ ಇರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಕೋರಿದರು.

ಕ್ರಮ:- ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

4.ಶ್ರೀ.ಪುಷ್ಪರಾಜ್, ಸದಸ್ಯರು ರವರು ಮಾತನಾಡಿ 1) ಆರ್.ಆರ್.ಲೇಔಟ್ 2ನೇ ಅಡ್ಡರಸ್ತೆಯಲ್ಲಿ ವಿದ್ಯುತ್ ಕಂಬಗಳು ರಸ್ತೆಯ ಮಧ್ಯದಲ್ಲಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುತ್ತದೆ. 2) ರೈಲ್ವೇ ಸ್ಟೇಷನ್ ಮುಖ್ಯರಸ್ತೆಯಲ್ಲಿ ಇರುವ ವಾಟರ್ ಟ್ಯಾಂಕ್ ಹತ್ತಿರ ಕಸ ಸುರಿಯುತ್ತಿರುತ್ತಾರೆ. ಇದರಿಂದ ರಸ್ತೆಯಲ್ಲಿ ಓಡಾಡಲು ತೊಂದರೆಯಾಗುತ್ತಿದ್ದು, ಮತ್ತು ತುಂಬಾ ವಾಸನೆ ಬರುತ್ತಿರುತ್ತದೆ. 3) ರೈಲ್ವೇ ಸ್ಟೇಷನ್ ರಸ್ತೆಯಲ್ಲಿರುವ ಬಾರ್‌ಗಳ ಮುಂದೆ ವಾಹನ ಪಾರ್ಕಿಂಗ್ ಮಾಡಿ ಸಂಚಾರಕ್ಕೆ ತೊಂದರೆ ಉಂಟುಮಾಡುತ್ತಿರುತ್ತಾರೆ. ಸದರಿ ಬಾರ್ ಮಾಲೀಕರಿಗೆ ತಿಳುವಳಿಕೆ ನೀಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಕೋರಿದ್ದು, 4) ವಿಜಿನಾಪುರ ವಾರ್ಡ್‌ನಲ್ಲಿರುವ ಕೋಳಿ ಅಂಗಡಿಗಳ ಮಾಲೀಕರುಗಳು ತ್ಯಾಜ್ಯವನ್ನು ಮೂಟೆಕಟ್ಟಿ ರಸ್ತೆ ಚರಂಡಿಗಳ ಒಳಗೆ ಬಿಸಾಡುತ್ತಿರುತ್ತಾರೆ. ಅಂತಹ ಅಂಗಡಿಗಳನನ್ನು ಗುರುತಿಸಿ ಅವರ ಪರವಾನಗಿಯನ್ನು ರದ್ದು ಮಾಡಿ ಅಂತಹ ಅಂಗಡಿಗಳಿಗೆ ನೋಟೀಸ್ ನೀಡಿ ದಂಡ ವಿಧಿಸಬೇಕೆಂದು ಸಭೆಯಲ್ಲಿ ಇದರ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.

ಕ್ರಮ:- 1. ಸಹಾಯಕ ಅಭಿಯಂತರರು (ಬೆಸ್ಕಾಂ) ರವರಿಗೆ ಅಗತ್ಯ ಕ್ರಮ ವಹಿಸಲು ಸಭೆಯು ಸೂಚಿಸಿತು.
2. ಸಭೆಯಲ್ಲಿ ಹಾಜರಿದ್ದ ಆರೋಗ್ಯ ಅಧಿಕಾರಿಗಳಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.
3. ಸಭೆಯಲ್ಲಿ ಹಾಜರಿದ್ದ ಟ್ರಾಫಿಕ್ ಪೋಲೀಸ್ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.
4. ಸಭೆಯಲ್ಲಿ ಹಾಜರಿದ್ದ ಆರೋಗ್ಯ ಅಧಿಕಾರಿಗಳಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಅಧ್ಯಕ್ಷರು ರವರು ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Kragath Mauz
5/6/22

**ವಾರ್ಡ್ ಸಮಿತಿ ಕಾರ್ಯದರ್ಶಿಗಳು,**
**ವಾರ್ಡ್ ನಂ.51, ವಿಜಿನಾಪುರ**